# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 3 ಬಿಪಿಇ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:05–02–2018

## ಆಯವ್ಯಯ ಸುತ್ತೋಲೆ

ವಿಷಯ: **2018–19ನೇ ಸಾಲಿನ ಆಯವ್ಯಯ ದಸ್ತಾವೇಜುಗಳನ್ನು ಮುದ್ರಿಸುವ ಬಗ್ಗೆ.**

* * * * *

ಆಯವ್ಯಯ ಮಂಡನೆಯ ಕಾರ್ಯದಲ್ಲಿ ಆಯವ್ಯಯಕ್ಕೆ ಸಂಬಂಧಿಸಿದ ದಸ್ತಾವೇಜುಗಳ ಮುದ್ರಿತ ಪ್ರತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಿಂದಿನ ದಿನಗಳಲ್ಲಿ ತಾಂತ್ರಿಕತೆ ಅಷ್ಟಾಗಿ ಮುಂದುವರೆಯದ ಕಾರಣ ಮುದ್ರಿತ ಪ್ರತಿಗಳ ಅವಲಂಬನೆ ಸಹಜ ಸ್ವಾಭಾವಿಕ ಪ್ರಕ್ರಿಯೆ ಆಗಿರುತ್ತದೆ. ಆದರೆ, ಮುಂದುವರೆದ ತಾಂತ್ರಿಕತೆಯ ಇಂದಿನ ದಿನಗಳಲ್ಲಿ, ಅಂತರ್ಜಾಲ ತಾಣಗಳ ಉಪಯೋಗ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ಕಾಗದ ರಹಿತ ದಸ್ತಾವೇಜುಗಳ ಬಳಕೆಯ ಕಡೆಗೆ ಒತ್ತು ನೀಡಬೇಕಾಗಿರುತ್ತದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹಣ ಉಳಿತಾಯವಾಗುವುದರ ಜೊತೆಗೆ ಕಾಗದ ಮುದ್ರಣಕ್ಕೆ ಅವಶ್ಯವಿರುವ ಮರ, ನೀರು ಹಾಗೂ ವಿದ್ಯುತ್ ಉಳಿತಾಯದಿಂದ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದಾಗಿದೆ. ಈಗಾಗಲೇ ಹಿಮಾಚಲ ಪ್ರದೇಶದಲ್ಲಿ ಕಾಗದ ರಹಿತ ಬಜೆಟ್ ಮಂಡಿಸಲಾಗುತ್ತಿರುವುದನ್ನು ಇಲ್ಲಿ ಗಮನಿಸಬಹುದು.

ಆದ್ದರಿಂದ ಆಯವ್ಯಯ ದಸ್ತಾವೇಜುಗಳ ಮುದ್ರಿತ ಪ್ರತಿಗಳ ಉಪಯೋಗವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಇನ್ನು ಮುಂದೆ ಆಡಳಿತ ಇಲಾಖೆಯ ಕಾರ್ಯದರ್ಶಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು /ಜಿಲ್ಲಾಧಿಕಾರಿಗಳು/ಮುಖ್ಯ ಇಂಜಿನಿಯರ್ ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಮುದ್ರಿತ ರೂಪದಲ್ಲಿ ಒದಗಿಸಲಾಗುವುದಿಲ್ಲ. ಆಯವ್ಯಯ ಭಾಷಣ ಒಳಗೊಂಡಂತೆ ಎಲ್ಲಾ ಆಯವ್ಯಯ ದಸ್ತಾವೇಜುಗಳನ್ನು ಪಿಡಿಎಫ್ ರೂಪದಲ್ಲಿ ಆಯವ್ಯಯ ಮಂಡನೆಯಾದ ದಿನವೇ ಆರ್ಥಿಕ ಇಲಾಖೆಯ ವೆಬ್ ಸೈಟ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ. ಸರ್ಕಾರದ ಎಲ್ಲಾ ಅಧಿಕಾರಿಗಳು / ನೌಕರರು ತಮ್ಮ ಕಚೇರಿಗೆ ಅವಶ್ಯಕವಾಗಿರುವ ಆಯವ್ಯಯ ದಸ್ತಾವೇಜುಗಳಲ್ಲಿನ ಮಾಹಿತಿಯನ್ನು ಅರ್ಥಿಕ ಇಲಾಖೆಯ ವೆಬ್ ವಿಳಾಸ www.finance.kar.nic.in ನಲ್ಲಿ ಪಡೆಯುವಂತೆ ತಿಳಿಸಲಾಗಿದೆ.



(ರಿತ್ವಿಕ್ ಪಾಂಡೆ)
ಸರ್ಕಾರದ ಕಾರ್ಯದರ್ಶಿ(ಆ ಮತ್ತು ಸಂ)
ಆರ್ಥಿಕ ಇಲಾಖೆ

ಇವರಿಗೆ:

1. ಸರ್ಕಾರದ ಎಲ್ಲಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
3. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
4. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಎಲ್ಲಾ ಆಡಳಿತಾಧಿಕಾರಿ / ಮುಖ್ಯ ಇಂಜಿನಿಯರ್ ರವರಿಗೆ.
6. ಶಾಖಾ ರಕ್ಷಾ ಕಡತ.